ಗೊತ್ತ ಚಿನ್ನಾರಿ ಮುತ್ತ'–ಮುಂತಾದ ಹಾಡುಗಳನ್ನು ಅದೆಷ್ಟು ಮಕ್ಕಳು ಅದೆಷ್ಟು ಬಾರಿ ಹಾಡಿ, ಕುಣಿದು ತಣಿದಿದ್ದಾರೋ?!

ಸಿನಿಮಾದಲ್ಲಿ ಮೊದಲಿನಿಂದಲೂ ನಡೆದುಕೊಂಡು ಬಂದ ಒಂದು ಸಂಪ್ರದಾಯ ಉಂಟು. ಅಲ್ಲಿ ಮೊದಲು ಟ್ಯೂನ್ ಸಿದ್ಧವಾಗುತ್ತದೆ. ಆ ಟ್ಯೂನಿಗೆ ತಕ್ಕಂತೆ ಶಬ್ದಗಳನ್ನು ಜೋಡಿಸಿ ಗೀತೆಯನ್ನು ರಚಿಸಬೇಕಾಗುತ್ತದೆ! ಕೈಕಾಲು ಕಟ್ಟಿಕೊಂಡು ಸಾಮು ಮಾಡುವ ಪ್ರಯಾಸವಿದು! ಈ ಬಿಕ್ಕಟ್ಟಿನಲ್ಲೇ ನಮ್ಮ ಅನೇಕ ಚಿತ್ರಸಾಹಿತಿಗಳು ಸೊಗಸಾದ ಕೆಲವಾದರೂ ಗೀತೆಗಳನ್ನು ರಚಿಸಿರುವರು ಎನ್ನುವುದು ನನಗಂತೂ ಬೆರಗಿನ ವಿಷಯ. ಹಂಸಲೇಖರ ಟ್ಯೂನಿಗೆ ಹಾಡು ಬರೆಯುವಾಗ ನಾನೂ ಸಾಕಷ್ಟು ಬಿಕ್ಕಟ್ಟುಗಳನ್ನು ಅನುಭವಿಸಿದ್ದೇನೆ. ಒಮ್ಮೆ ಸಂಯೋಜನೆ ಮನಸ್ಸನ್ನು ಹೊಕ್ಕಿತೆಂದರೆ ಆಗ ಉತ್ತಮ ಗುಣ ಮಟ್ಟದ ಗೀತೆಯನ್ನು ರಚಿಸುವುದು ಲಯದ ವಿಷಯದಲ್ಲಿ ನುರಿತ ಕವಿಗೆ ಕಷ್ಟವಾಗಲಾರದು! ಕಾಮನ ಬಿಲ್ಲಿನ ಮೇಲೆ ಕಾವ್ಯಗುಣವುಳ್ಳ ಗೀತೆ ಎಂದು ಈಗಲೂ ನನಗೆ ವಿಶ್ವಾಸ ಉಂಟು. ಅಶ್ವತ್ಥರು ಮೊದಲು ನೀವು ಗೀತೆಯನ್ನು ಬರೆಯಿರಿ... ನೀವು ಬರೆದದ್ದಕ್ಕೆ ನಾನು ಸ್ವರ ಸಂಯೋಜನೆ ಮಾಡುತ್ತೇನೆ ಎನ್ನುತ್ತಿದ್ದುದರಿಂದ 'ಚಿನ್ನಾರಿಮುತ್ತ'ದ ಹಾಡುಗಳು ಅಷ್ಟು ಚೆಲುವಾಗಿ ಬಂದಿವೆ ಎನ್ನುವುದು ಕೇವಲ ಅರ್ಧಸತ್ಯ. ಕಾರಣ, ಚಿನ್ನಾರಿಮುತ್ತದ ಎರಡು ಹಾಡುಗಳನ್ನು ನಾನು ಟ್ಯೂನಿಗೇ ಬರೆದದ್ದು. ಅವು ಯಾವುವೆಂದು ನಾನು ಹೇಳದೆ ಹೋದರೆ, ಕಾವ್ಯಗುಣವನ್ನೇ ಲಕ್ಷಿಸಿ ಅದನ್ನು ಪತ್ತೆ ಮಾಡುವುದು ಕಷ್ಟವೇ! ಎಲೆಗಳು ನೂರಾರು ಎಂಬ ನನ್ನ ಬಹು ಜನಪ್ರಿಯವಾದ ಹಾಡಿದೆಯಲ್ಲ ಅದು ಅಶ್ವತ್ಥರು ನೀಡಿದ ಟ್ಯೂನಿಗೆ ಬರೆದ ಹಾಡು ಎಂಬುದು ಅನೇಕರಿಗೆ ತಿಳಿದಿಲ್ಲ. ಐದು ಬೆರಳು ಕೂಡಿ ಒಂದು ಮುಷ್ಟಿ ಎಂಬ ಜನಪ್ರಿಯ ಗೀತೆಯೂ ನಾನು ಟ್ಯೂನಿಗೆ ರಚಿಸಿದ್ದು. ಈಚೆಗೆ ಬಹು ಜನಪ್ರಿಯವಾದ ಕಿರಿಕ್ ಪಾರ್ಟಿಯಲ್ಲಿ ನನ್ನ ಭಾವಗೀತೆ 'ತೂಗುಮಂಚದಲ್ಲಿ ಕೂತು' ಕವಿತೆಯನ್ನು (ಅಶ್ವತ್ಥ್ ಸಂಯೋಜನೆ) ಅಳವಡಿಸಿಕೊಳ್ಳಲಾಯಿತು. ಆಪ್ತರಾದ ರಮೇಶ ಅರವಿಂದರು ತಮ್ಮ 'ಕ್ರೇಜಿಕುಟುಂಬ'ದಲ್ಲಿ 'ಅಮ್ಮಾ ನಾನು ದೇವರಾಣೆ ಬೆಣ್ಣೆ ಕದ್ದಿಲ್ಲಮ್ಮ' ಗೀತೆಯನ್ನು (ಅನಂತಸ್ವಾಮಿಗಳ ಸಂಯೋಜನೆ) ಅದ್ಭುತವಾಗಿ ಬಳಸಿಕೊಂಡಿದ್ದಾರೆ. ಜನಪ್ರಿಯವಾದ ಭಾವಗೀತೆಗಳನ್ನು ಸಿನಿಮಾಕ್ಕೆ ಅಳವಡಿಸುವ ಪ್ರಯೋಗಗಳು ಹಿಂದಿನಿಂದಲೂ ನಡೆಯುತ್ತಾ ಬಂದಿವೆ. ನಾಗಾಭರಣ 'ಮೈಸೂರ ಮಲ್ಲಿಗೆ'ಯ ಗೀತೆಗಳನ್ನು ಆಧರಿಸಿಯೇ ಒಂದು ಯಶಸ್ವೀ ಸಿನಿಮಾ ನಿರ್ಮಿಸಿದ್ದನ್ನು ಇಲ್ಲಿ ವಿಶೇಷವಾಗಿ ನೆನೆಯಲೇಬೇಕು. ನಾನೂ ಒಂದು ಕೈ ನೋಡಿಯೇ ಬಿಡೋಣವೆಂದು ಆರ್.ಎಸ್. ಕುಮಾರ್ ಮತ್ತು ನಿಖಿಲ್ ಮಂಜು ಸಹಕಾರದೊಂದಿಗೆ ನಿರ್ದೇಶಿಸಿದ ಮೊದಲ (ಪ್ರಾಯಃ ಕೊನೆಯ!) ಸಿನಿಮಾದಲ್ಲಿ ಹಾಡುಗಳ ಸಮೃದ್ಧಿಯೇ ಸಮೃದ್ಧಿ. ಹಾಡುಗಳಿದ್ದರೆ ಅವಾರ್ಡಿಗೆ ತೊಂದರೆ ಎಂಬ ಹಿತವಚನವನ್ನೂ ಲಕ್ಷಿಸದೆ ಆ ಸಿನಿಮಾದಲ್ಲಿ ಅನೇಕ ಸಾಹಿತ್ಯಗುಣವುಳ್ಳ ಹಾಡುಗಳನ್ನು ಅಳವಡಿಸಿದ್ದೇನೆ! ಅವಕ್ಕೆ ಭಾವಗೀತಾಜಗತ್ತಿನ ಉಪಾಸನಾ ಮೋಹನ್ ಸೊಗಸಾದ ಸಂಗೀತ ನೀಡಿದ್ದಾರೆ! (ಸಕ್ಕರೆಯ ಪಾಕದಲಿ ಅದ್ದಿರುವ ಜಾಮೂನು–ಗೀತೆಯನ್ನು ಎಂ.ಡಿ. ಪಲ್ಲವಿಯ ಧ್ವನಿಯಲ್ಲೇ ಕೇಳಿ ಆನಂದಿಸಬೇಕು). ಕಣಗಾಲ್ ಪುಟ್ಟಣ್ಣನವರಂತೆ ಬಳಸುವುದಾದರೆ ಸಿನಿಮಾದಲ್ಲಿ ಯಾಕೆ ಹಾಡುಗಳನ್ನು ಬಳಸಬಾರದು? ಹಾಡುಗಳ ಬಗ್ಗೆ ನಮ್ಮಲ್ಲಿ ಗುಟ್ಟಾಗಿ ಪ್ರಚಲಿತವಿರುವ ಮುಜುಗರ–ಹಿಂಜರಿಕೆಯನ್ನು ಸೂಚಿಸಲು ಈ ಮಾತು ಬರೆಯಬೇಕಾಯಿತು!

ಕಾವ್ಯದ ಪ್ರಯೋಗಶೀಲತೆಗೆ ತೆರೆದುಕೊಂಡವರಿಗೆ ಯಾವುದೂ ಅಸಾಧ್ಯವಲ್ಲ! ಕಾವ್ಯದಲ್ಲಿ ಧ್ಯಾನದಂತೆಯೇ ಕುಣಿತ, ಕ್ರೀಡೆ, ಬೆಡಗು ಈ ಮೊದಲಾದ ಅಂಶಗಳೂ ಸೇರಿಕೊಂಡಿವೆ. ಅವಕ್ಕೆಲ್ಲಾ ತೆರೆದೆದೆಯ ಆಕಾಶ ಮತ್ತು ಅವಕಾಶ ಕಲ್ಪಿಸುವುದು ಈ ಗೀತಮಾಧ್ಯಮ. ಗೀತೆ ಪ್ರೀತಿ ಪ್ರಣಯಕ್ಕೆ ಮಾತ್ರ ಮೀಸಲಾದುದೇನಲ್ಲ. ಪ್ರಖರವಾದ ವೈಚಾರಿಕ ಪ್ರಜ್ಞೆ, ಕುವೆಂಪು, ಬೇಂದ್ರೆ, ಪು.ತಿ.ನ ಅವರ